section -5 ನಲ್ಲಿ ಏನು ಕರ್ನಾಟಕ ಕೃಷ್ಣ water dispute review ಆಗುತ್ತದೆ. ಅದು ಸೆಪ್ಟೆಂಬರ್‌ನಲ್ಲಿ ಮುಗಿಯುತ್ತದೆ. ಆಗ ನಮಗೆ ಅವಕಾಶ ಸಿಗಬಹುದು. ಆ 4 balancing reservoir ನಲ್ಲಿ ಸ್ವಲ್ಪ ನೀರನ್ನು ಬಳಕೆ ಮಾಡಬಹುದು ಎಂದು almost 10 TMC ಯಷ್ಟು ಬಳಕೆ ಮಾಡಬಹುದು ಎಂದು ಅಂದಾಜಿಸಲಾಗಿದೆ. ಈ ಮೂರು option ಅನ್ನು ನೋಡುತ್ತಿದ್ದೇವೆ. ಈ ಪ್ರಯೋಗದ ಫಲಿತಾಂಶ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಈಗ ಶ್ರೀ ಹಾಲಪ್ಪನವರು. ಬೇರೆಯವರಿಗೆ ಇಲ್ಲ. ಗಮನ ಸೆಳೆಯುವುದಕ್ಕೆ ಅಷ್ಟು detail clarification ಕೊಟ್ಟಿದ್ದಾರೆ.

ಶ್ರೀ ವೆಂಕಟರಾವ್ ನಾಡಗೌಡ: ತಾವು ಒಂದು ಸಾರಿ ಸಭೆ ಕರೆದಿದ್ದಿರಿ. ಈಗ ಮತ್ತೊಮ್ಮೆ ಸಭೆ ಕರೆದು ಚರ್ಚೆ ಮಾಡಿದರೆ, ಒಳ್ಳೆಯದು. ಈ dump ಮಾಡಿದ್ದನ್ನು ಒಯ್ಯವುದು ಹೇಗೆ, ರೈತರು ಬಳಸಿಕೊಳ್ಳುವುದಕ್ಕೆ ಅವಕಾಶ ಇದೆಯೇ ಎನ್ನುವುದನ್ನು ಹೇಳಬೇಕೆಂದು ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ನಾನು ಕೂಡಾ ಅದನ್ನೇ ಹೇಳಿರುವುದು. ಆ feasibility ಯನ್ನೆಲ್ಲಾ study ಮಾಡಬೇಕಾಗುತ್ತದೆ. ಅದು ಸುಲಭವಲ್ಲ. Global challenge ಎಂದೇ ನಾನು ಹೇಳಿರುವುದು. ಅದ್ದರಿಂದ ಈ ಮೂರು option ನಲ್ಲಿ ಯಾವುದು ಸುಲಭವಾಗಿ ಮಾಡಬಹುದು ಅದನ್ನು ಮಾಡುತ್ತೇವೆ.

ಅಧ್ಯಕ್ಷರು: ಈಗ ಶ್ರೀ ಶ್ರೀಕಾಂತ ಕುಲಕರ್ಣಿಯವರು.

4. ವಿಷಯ: ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಬಲ ದಂಡೆಯ 14 ಹಳ್ಳಿಗಳ ಶಾಲೆಗಳ ಹಳೆಯ ಕಟ್ಟಡ ರಿಪೇರಿ ಹಾಗೂ ಹೊಸ ಕಟ್ಟಡಗಳನ್ನು ಕಟ್ಟುವ ಬಗ್ಗೆ

ಶ್ರೀ ಶ್ರೀಕಾಂತ ಕುಲಕರ್ಣಿ (ಜಮಖಂಡಿ): ಸನ್ಮಾನ್ಯ ಅಧ್ಯಕ್ಷರೆ, ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಬಲ ದಂಡೆಯ 14 ಹಳ್ಳಿಗಳ ಶಾಲೆಗಳ ಹಳೆಯ ಕಟ್ಟಡ ರಿಪೇರಿ ಹಾಗೂ ಹೊಸ ಕಟ್ಟಡಗಳ ಕಟ್ಟುವಿಕೆಯ ಬಗ್ಗೆ ಮಾನ್ಯ ಶಿಕ್ಷಕರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಪುನರ್ ವಸತಿ ಕೇಂದ್ರಗಳಲ್ಲಿನ ಹೊಸ ಕಟ್ಟಡಗಳಿಗೆ ಶಾಲೆಗಳನ್ನು ಸ್ಥಳಾಂತರಿಸಲು ಗ್ರಾಮದ ಜನ ಸಮುದಾಯವನ್ನು ಪದೆ, ಪದೆ, ವಿನಂತಿಸಿದಾಗ್ಯೂ ಕೂಡಾ ಗ್ರಾಮಸ್ಥರು ಮತ್ತು ಎಸ್.ಡಿ.ಎಂ.ಸಿಯವರು ಅಲ್ಲಿಗೆ ಮಕ್ಕಳನ್ನು ಕಳುಹಿಸಲು ಸಿದ್ದರಿಲ್ಲವಿರುವುದರಿಂದ ಅದೇ ಗ್ರಾಮದಲ್ಲಿ ಹಳೇ ಶಾಲಾ ಕಟ್ಟಡದಲ್ಲಿ ಶಾಲೆಗಳು ನಡೆಯುತ್ತಿದೆ.

ಸದರಿ ವಿಷಯದಲ್ಲಿ ವಸ್ತುಸ್ಥಿತಿ ಆಧಾರದ ಮೇಲೆ ಸರ್ಕಾರವು ಪುನರ್ ವಸತಿ ಕೇಂದ್ರಗಳಲ್ಲಿರುವ ಹೊಸ ಕಟ್ಟಡಗಳಿಗೆ ಶಾಲೆಗಳನ್ನು ಸ್ಥಳಾಂತರಿಸಲು ಪೋಷಕರುಗಳ ಎಸ್‌ಡಿಎಂಸಿ ಯವರ ಮನವೊಲಿಸಿ ಕ್ರಮವಹಿಸಲಾಗುವುದು.

ಅಧ್ಯಕ್ಷರು: ಅವರು ಏನೋ clarification ಕೇಳುವವರಿದ್ದಾರೆ ಕೇಳಲಿ.

ಶ್ರೀ ಶ್ರೀಕಾಂತ ಕುಲಕರ್ಣಿ: ಸನ್ಮಾನ್ಯ ಅಧ್ಯಕ್ಷರೆ,...

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಂದೇ ನಿಮಿಷ ನಾನು ಹೇಳುತ್ತೇನೆ. ಸನ್ಮಾನ್ಯ ಅಧ್ಯಕರೆ ಈ ವಿಷಯವನ್ನು ಅವರು ಬೇಡಿಕಗಳ ' ಮೇಲೆ ಮಾತನಾಡುವಾಗಲೂ ಮಾತನಾಡಿದ್ದಾರೆ. ಪ್ರಶ್ನೆ ರೂಪದಲ್ಲಿ ಇದನ್ನು ತಂದಿದ್ದರು. ಈಗ 73 ರಡಿಯಲ್ಲಿ ಇದನ್ನು ತಂದಿದ್ದಾರೆ. ಹಾಗಾಗಿ ಈ ವಿಷಯದ ಬಗ್ಗೆ ಶ್ರೀಕಾಂತ ಕುಲಕರ್ಣಿಯವರ ಜೊತೆ ನಾನು ಮಾತನಾಡಿದ್ದೇನೆ. ವಿವರವಾದ ಪತ್ರವನ್ನು ಕೊಟ್ಟಿದ್ದೇವೆ. ಇದೊಂದೊ ತಾಂತ್ರಿಕವಾದ ಸಮಸ್ಯೆ. ಈಗ ನಾವು rehabilitation area ದಲ್ಲಿ ಶಾಲೆಗಳನ್ನು ಕಟ್ಟಿದ್ದೇವೆ. ಆ ಶಾಲೆಗಳಿಗೆ ಹೋಗುವುದಿಲ್ಲ. ಏಕೆಂದರೆ Dam height ಹೆಚ್ಚಾದರೆ ಮಾತ್ರ ಮುಳುಗುತ್ತದೆ. ಮುಳುಗಿದರೆ ಮಾತ್ರ ಊರು ಬಿಟ್ಟು ಹೋಗುತ್ತಾರೆ. ಇಲ್ಲದಿದ್ದರೆ ಊರು ಬಿಟ್ಟು ಹೋಗುವುದಿಲ್ಲ. ಹಾಗಾಗಿ ಈ 13 ಶಾಲೆಗಳು ಅದೇ ಸ್ಥಿತಿಯಲ್ಲಿ ಅಲ್ಲಿದೆ. ಮಕ್ಕಳು ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆದರೆ ಇದು ಮುಳುಗಡೆಯಾಗುವ ಪ್ರದೇಶಕ್ಕೆ ಹೋಗಬೇಕಾಗುತ್ತದೆನ್ನುವ ಕಾರಣಕ್ಕಾಗಿ repair ಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಎನ್ನುವುದು ತಾಂತ್ರಿಕವಾಗಿರುವುದು. ನಾನು ಇದನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಲ್ಲಿ ಏನು ಹಣ ಕೊಡುತ್ತೇವೆ, ಅದನ್ನು ಬಳಕೆ

ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಳ್ಳವ ಒಂದು ಯೋಚನೆಯನ್ನೂ ಮಾಡುತ್ತಿದ್ದೇವೆ. ಅಥವಾ ಅಲ್ಲಿ ಯಾವ dam ನಿಂದ ನೀರು ನಿಂತಿದೆಯೋ ಅಲ್ಲಿ ಪುನರ್ ವಸತಿಯನ್ನೆಲ್ಲಾ ಕಲ್ಪಿಸಿ ಮೂಲಭುತ ವ್ಯವಸ್ಥೆಯನ್ನು ಮಾಡಿದ್ದಾರೋ ಅದರಡಿಯಲ್ಲಿಯೇ ಇದಕ್ಕೆ ಬೇಕಾಗಿರುವಂತಹ ರಿಪೇರಿಗೆ ಬೇಕಾದ ಹಣಕಾಸನ್ನು ಕೊಡಿಸುವುದಕ್ಕಾದರೂ ಒಂದು ಯೋಜನೆಯನ್ನು ಮಾಡುತ್ತೇವೆ. ಯಾವುದೇ ಕಾರಣಕ್ಕೆ ಶಾಲೆಯನ್ನು ಸುಭದ್ರವಾಗಿಡುವುದಕ್ಕೆ ಬೇಕಾದ ಒಂದು ಪ್ರಯತ್ನವನ್ನು, ಜವಾಬ್ದಾರಿಯನ್ನು ನಾವು ಶಿಕ್ಷಣ ಇಲಾಖೆಯವರು ತೆಗೆದುಕೊಳ್ಳುತ್ತೇವೆ. ನಿಶ್ಚಿತವಾಗಿ ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಈ ಕುರಿತಂತೆ ಈ ಶಾಲೆಗಳನ್ನು ಸುಸ್ಥಿತಿಯಲ್ಲಿಡಲು ಬೇಕಾದ ಕ್ರಮವನ್ನು ಕೈಗೊಳ್ಳಲು ಸರ್ಕಾರದಿಂದ ನಮ್ಮ ಎಲ್ಲಾ ಪ್ರಯತ್ನ ಮಾಡುತ್ತೇವೆ.

ಶ್ರೀ ಶ್ರೀಕಾಂತ ಕುಲಕರ್ಣಿ: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಹೇಳಿದರಲ್ಲ. ಸ್ಪಷ್ಟವಾಗಿ ಹೇಳಿದ್ದಾರೆ. ನೀವು demand ನಲ್ಲಿ ಹೇಳಿದಿರಿ ಮತ್ತೆ ಮತ್ತೆ ಏನು ಕೇಳುವುದಕ್ಕೆ ಇರುವುದು ?

ಶ್ರೀ ಶ್ರೀಕಾಂತ ಕುಲಕರ್ಣಿ: ಅಲ್ಲ ಅಧ್ಯಕ್ಷರೆ, ಮೂರು ಗ್ರಾಮಗಳ ಪುನರ್ ವಸತಿ ಏನು ಆಗಬೇಕಿತ್ತು, ಅದು ಇನ್ನು final ಆಗಿಲ್ಲ. ಹೀಗಾಗಿ ಯಾರೂ ಆ ಗ್ರಾಮಗಳನ್ನು ಬಿಟ್ಟು ಹೋಗುವ ಸ್ಥಿತಿಯಲ್ಲಿ ಇಲ್ಲ. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದ್ದರಿಂದ ಕೆಲವು ಕಡೆ 22 ಹೊಸ ಶಾಲಾ ರೂಮುಗಳನ್ನು ಕಟ್ಟಬೇಕಾಗುತ್ತದೆ. ಮತ್ತು ಮಳೆ ಬಂದರೆ ವಿದ್ಯಾರ್ಥಿಗಳು ಮನೆಗೆ ಓಡಿಹೋಗುವಂತಹ ಪರಿಸ್ಥಿತಿ ಇರುವುದರಿಂದ ಶಿಕ್ಷಣಕ್ಕೆ ಇಷ್ಟು ಕೊಟ್ಟಿರುವ ನಮ್ಮ ಸರ್ಕಾರ ಇದರ ಬಗ್ಗೆ ತಾತ್ಸಾರ ಭಾವನೆ ತಳೆಯುವ ಅಗತ್ಯವಿಲ್ಲ. ದಯವಿಟ್ಟು ತಕ್ಷಣ ಕಟ್ಟುವ ವ್ಯವಸ್ಥೆ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಶ್ರೀಕಾಂತ ಕುಲಕರ್ಣಿಯವರು ಶಾಸಕರಾಗಿ, ಆ ಭಾಗದ ಜನರ ಭಾವನೆಯನ್ನು ಇಲ್ಲ ಸಮರ್ಥವಾಗಿ ಉಲ್ಲೇಖಿಸುತ್ತಿದ್ದಾರೆ. ನಾನು ಅದನ್ನು ಗೌರವಿಸುತ್ತೇನೆ. ಅಲ್ಲಿರುವ ಪ್ರಶ್ನೆ ಸರ್ವ ಶಿಕ್ಷಣ ಅಭಿಯಾನದ ಕ್ರಿಯಾ

ಯೋಜನೆ ಮಾಡುವುದಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿ ಇದೆ. ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಶಾಸಕರು ಅವರೇ ಅಧ್ಯಕ್ಷರಾಗಿರುತ್ತಾರೆ. ಹೊಸ ಕೊಠಡಿಗಳು ಬೇಕಾದಲ್ಲಿ ಅವರೂ ಸಹ ಹಾಕಿಕೊಳ್ಳುವುದಕ್ಕೆ ಅವಕಾಶವಿದೆ. ಜಿಲ್ಲಾ ಮಟ್ಟದಲ್ಲಿಯೂ ಸಮಿತಿಗಳಿವೆ. ಆದರೆ ಈ ತಾಂತ್ರಿಕ ಸಮಸ್ಯೆಗಳೇನಿವೆ, rehabilitation area ದಲ್ಲಿ ಕೊಡುವುದು, ಕೊಡಬಾರದು ಎನ್ನುವುದು ಅದನ್ನು ಸರಿಪಡಿಸಲು ಜಿಲ್ಲಾಧಿಕಾರಿಗಳ ಜೊತೆ ಮಾತನಾಡಿ ನಮ್ಮ ಇಲಾಖೆಯ ವತಿಯಿಂದಲೂ ಜವಾಬ್ದಾರಿ ತೆಗೆದುಕೊಂಡು ಹಣದ ಬಳಕೆ ಮೂಲ ಸ್ಥಳದಲ್ಲಿ ಆಗುವುದಕ್ಕೆ ಬೇಕಾದ ತಾಂತ್ರಿಕ ತೊಂದರೆಯನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ.

5. ವಿಷಯ: 2003 ರಲ್ಲಿ Special recruitment ಎಂದು ಮಾಡಿದ್ದ ಸುಮಾರು 1347 ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿಯಂತರರನ್ನು 2005 ರಲ್ಲಿ ಖಾಯಂ ಮಾಡಲಾಗಿದ್ದು, ಇದೀಗ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ

ಶ್ರೀ ಎಂ.ಪಿ. ಕುಮಾರಸ್ವಾಮಿ: Special recruitment ಎಂದು ಹೇಳಿ 2003 ರಲ್ಲಿ ಮಾಡಿದ್ದ ಸುಮಾರು 1347 ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿಯಂತರರನ್ನು 2005 ರಲ್ಲಿ ಖಾಯಂ ಮಾಡಲಾಗಿದ್ದು, ಈ ಸಂಬಂಧ ಇದೀಗ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಬಾಕಿ ಇದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ The Karnataka Civil Services (Unfilled vacancies reserved for persons belonging to the schedule castes and the Schedule Tribes) (Special Recruitment) Rules 2001ರ ನಿಯಮಾವಳಿಯು ದಿನಾಂಕ: 22-11-2001ರಂದು ಜಾರಿಗೆ ಬಂದಿರುತ್ತದೆ. ಲೋಕೋಪಯೋಗಿ ಇಲಾಖೆ,